# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 571
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 11.03.2025
ಉತ್ತರಿಸಬೇಕಾದ ಸಚಿವರು : ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಇರುವ ಒಟ್ಟು ಮಾರುಕಟ್ಟೆ ಮತ್ತು ವಾಣಿಜ್ಯ ಸಂಕೀರ್ಣಗಳೆಷ್ಟು: ಅವುಗಳನ್ನು ನಿಗಧಿತವಾಗಿ ಮಾಡಲಾಗಿದೆಯೇ: ಹಾಗಿದ್ದಲ್ಲಿ ಅದರಿಂದ ಬರುತ್ತಿರುವ ಆದಾಯವೆಷ್ಟು: | ರಾಜ್ಯದ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಇರುವ ಒಟ್ಟು ಮಾರುಕಟ್ಟೆಗಳ ಸಂಖ್ಯೆ: 526 ಮತ್ತು ವಾಣಿಜ್ಯ ಸಂಕೀರ್ಣಗಳ ಸಂಖ್ಯೆ: 1278.<br>ಇವುಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ/301/ಜಿಇಎಲ್ /2017 ದಿನಾಂಕ:19-7-2019 ರಂತೆ ಹರಾಜು ಪ್ರಕ್ರಿಯೆ ಮೂಲಕ ಕ್ರಮ ಕೈಗೊಳ್ಳಲಾಗಿದೆ.<br>ಮೇಲ್ಕಂಡ ಸಂಕೀರ್ಣಗಳಿಂದ ಬರುತ್ತಿರುವ ವಾರ್ಷಿಕ ಆದಾಯ ರೂ.1785.16ಲಕ್ಷಗಳು **(ವಿವರಗಳನ್ನು ಅನುಬಂಧದಲ್ಲಿ ನೀಡಿದೆ)** |
| ಆ) | ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು, ಮಾರುಕಟ್ಟೆ ಹಾಗೂ ಇತರ ಕಟ್ಟಡಗಳು ಎಷ್ಟು: ಪ್ರಸ್ತುತ ಇರುವ, ನಿರ್ಮಾಣವಾಗುತ್ತಿರುವ ಕಟ್ಟಡಗಳ ಸಹಿತ ಎಲ್ಲಾ ವಿವರ ನೀಡುವುದು: | • ಮಂಗಳೂರು ಮಹಾನಗರ ಪಾಲಿಕೆಯ ಅಧೀನದಲ್ಲಿರುವ ವಾಣಿಜ್ಯ ಸಂಕೀರ್ಣಗಳು-04 ಹಾಗೂ ಮಾರುಕಟ್ಟೆಗಳು-26<br>• ಪ್ರಸ್ತುತ ಸುರತ್ಕಲ್ ಹೊಸ ಮಾರುಕಟ್ಟೆ, ಕಂಕನಾಡಿ ಮಾರುಕಟ್ಟೆ ಮತ್ತು ಕೇಂದ್ರ ಮಾರುಕಟ್ಟೆಯ ಕಾಮಗಾರಿಗಳು ಪ್ರಗತಿ ಹಂತದಲ್ಲಿವೆ.<br>• ಕಂಕನಾಡಿ ಹೊಸ ಮಾರುಕಟ್ಟೆಯ ಕೆಳನೆಲ ಮತ್ತು ಮೇಲುನೆಲದ ಕಾಮಗಾರಿಯು ಪೂರ್ಣಗೊಂಡಿದ್ದು, ಹರಾಜು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |
| ಇ) | ಈ ರೀತಿ ನಿರ್ಮಿಸಿದ ಕಟ್ಟಡಗಳು ಭೌತಿಕವಾಗಿ ಯಾವಾಗ ಪೂರ್ಣಗೊಂಡಿವೆ: ಉದ್ಘಾಟನೆಯಾಗದ ಕಟ್ಟಡಗಳೆಷ್ಟು: ಹಾಗೂ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡದ ಕಟ್ಟಡಗಳೆಷ್ಟು: ಇದಕ್ಕೆ ಕಾರಣಗಳೇನು: ಕಟ್ಟಡ ಬಳಕೆಗೆ ತಡವಾಗುವಿಕೆ ಸದ್ರಿಕಟ್ಟಡಕ್ಕೆ ಪಡೆದ ಸಾಲ ಇತ್ಯಾದಿ ಮರುಪಾವತಿ ತಡವಾಗಿ ಪಾಲಿಕೆಗೆ ಹೆಚ್ಚುವರಿ ಹೊರೆಯಾಗುವುದಿಲ್ಲವೇ: (ವಿವರ ನೀಡುವುದು) | ಈ ರೀತಿ ನಿರ್ಮಿಸಿದ ಕಟ್ಟಡಗಳು ಭೌತಿಕವಾಗಿ ಪೂರ್ಣಗೊಂಡಿರುವ ಮತ್ತು ಉದ್ಘಾಟನೆಯಾಗದ ಕಟ್ಟಡಗಳ ಹಾಗೂ ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡದ ಕಟ್ಟಡಗಳ ವಿವರಗಳು ಈ ಕೆಳಕಂಡಂತಿವೆ.<br>• ಕದ್ರಿಮಾರುಕಟ್ಟೆ 2022 ರಲ್ಲಿ ಪೂರ್ಣಗೊಂಡಿದ್ದು ಹಾಗೂ ಕಂಕನಾಡಿ ಮಾರುಕಟ್ಟೆ ಭಾಗಾಂಶ (ಕೆಳನೆಲ ಮತ್ತು ಮೇಲುನೆಲ) ಪೂರ್ಣಗೊಂಡಿದ್ದು ಉದ್ಘಾಟನೆಗೊಂಡಿರುವುದಿಲ್ಲ.<br>• ಕದ್ರಿಮಾರುಕಟ್ಟೆಯ ನೆಲ ಮತ್ತು ಮೊದಲನೇ ಮಹಡಿಗೆ ಟೆಂಡರು ಕರೆಯಲಾಗಿದ್ದು, ಬಿಡ್ಡುದಾರರು ಈಗಾಗಲೇ ಠೇವಣಿ ಪಾವತಿಸಿರುತ್ತಾರೆ ಹಾಗೂ ತಳ ಅಂತಸ್ತಿನ ಕೊಠಡಿಗಳನ್ನು Right to first refusal ಮೇಲೆ ಹಳೇ ಬಾಡಿಗೆದಾರರಿಗೆ ಅವಕಾಶ ಕಲ್ಪಿಸಲಾಗಿದ್ದು, ಠೇವಣಿ ಪಾವತಿಸಲು ನೋಟೀಸು ನೀಡಲಾಗಿರುತ್ತದೆ.<br>• ಅಳಕೆ ಮಾರುಕಟ್ಟೆ ನಿರ್ಮಾಣ ಕಾಮಗಾರಿಯು 2020 ರಲ್ಲಿ ಪೂರ್ಣಗೊಂಡಿರುತ್ತದೆ. ದಿನಾಂಕ:18-11-2020 |

| | | |
|---|---|---|
| | | ರಂದು ಹರಾಜು ಕರೆಯಲಾಗಿದ್ದು, ಬಿಡ್ಡುದಾರರು ಭಾಗವಹಿಸದೇ ಇರುವುದರಿಂದ ದಿನಾಂಕ: 15-3-2021, 11-10-2022 ಮತ್ತು 12-9-2023 ರಂದು ಮರು ಹರಾಜು ಕರೆಯಲಾಗಿರುತ್ತದೆ.<br>• ಖಾಲಿ ಇರುವ ಮಳಿಗೆಗಳ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>• ನವೀಕೃತ ಕಂಕನವಾಡಿ ಮಾರುಕಟ್ಟೆಯ ಕೆಲನೆಲ ಮತ್ತು ಮೇಲು ನೆಲ ಅಂತಸ್ತಿನ ಕಾಮಗಾರಿ ಪೂರ್ಣಗೊಂಡಿದ್ದು, ಅಂಗಡಿ ಕೋಣೆಗಳನ್ನು ಹರಾಜು ಮಾಡುವ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.<br>• ಸದರಿ ಕಟ್ಟಡಗಳು ಪೂರ್ಣ ಪ್ರಮಾಣದಲ್ಲಿ ಪೂರ್ಣಗೊಂಡು ಬಾಡಿಗೆ ಆದಾಯ ಬರಲು ಪ್ರಾರಂಭವಾದಾಗಿನಿಂದ ಸಾಲ ಮರುಪಾವತಿಗೆ ಕ್ರಮಕೈಗೊಳ್ಳಲಾಗುವುದು. |
| ಈ) | ಹೊಸ ಕಟ್ಟಡಗಳನ್ನು ಕಟ್ಟಿದ್ದರೂ ಬಿಡ್ಡುದಾರರು ಭಾಗವಹಿಸದಿರಲು ಕಾರಣಗಳೇನು: ಕಟ್ಟಡ ಬಾಡಿಗೆ ಮತ್ತು ಲೀಜ್ ನಿಯಮಗಳನ್ನು ಬಿಡ್ಡುದಾರರ ಹಿತಾಸಕ್ತಿಗೆ ಅನುಗುಣವಾಗಿ ಹಾಗೂ ಪಾಲಿಕೆ ಆದಾಯಕ್ಕೆ ಕೊರತೆ ಬಾರದ ರೀತಿಯಲ್ಲಿ ಮಾರ್ಪಡಿಸಲು ಇಲಾಖೆ ಏನು ಕ್ರಮವಹಿಸಿದೆ: | ಚಾಲ್ತಿ ವರ್ಷದಲ್ಲಿ ಸ್ಥಿರಾಸ್ತಿ ಮೌಲ್ಯಕ್ಕೆ ಅನುಗುಣವಾಗಿ ಬಾಡಿಗೆ ಮತ್ತು ಠೇವಣಿ ನಿಗದಿಪಡಿಸಿರುವುದರಿಂದ ದರ ಲೆಕ್ಕಾಚಾರದ ಪ್ರಕಾರ ಬಾಡಿಗೆ ಹೆಚ್ಚಾಗಿದೆ ಎಂದು ದೂರುಗಳು ಬರುತ್ತಿರುವುದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಭಾಗವಹಿಸುತ್ತಿಲ್ಲ. ಸರ್ಕಾರದ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಅನುಸರಿಸಿ ಕ್ರಮಕೈಗೊಳ್ಳಲಾಗುತ್ತದೆ. |
| ಉ) | ಹೊಸ ಮಾರುಕಟ್ಟೆ ಕಟ್ಟಡಗಳನ್ನು ಖಾಲಿ ಉಳಿದು ಕಟ್ಟಡ ನಿರ್ವಹಣೆಯ ಕೊರತೆಯಿಂದ ಹಾಳಾಗುವ ಸಮಸ್ಯೆಯನ್ನು ಪರಿಹರಿಸಲು ಇಲಾಖೆ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳುತ್ತದೆ? | ಹೊಸ ಮಾರುಕಟ್ಟೆ ಕಟ್ಟಡದ ನಿರ್ವಹಣೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದೆ . |

**ಸಂಖ್ಯೆ: ನಅಇ 84 ಎಂಎನ್‌ಇ 2025 (ಇ)**

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ
ಯೋಜನಾ ಸಚಿವರು

'ಅನುಬಂಧ'

| ಕ್ರ.ಸಂ. | ಮಹಾನಗರ ಪಾಲಿಕೆಗಳ ವಿವರ | ಮಾರುಕಟ್ಟೆಗಳು ಸಂಖ್ಯೆ | ವಾಣಿಜ್ಯ ಸಂಕೀರ್ಣಗಳ ಸಂಖ್ಯೆ | ಮಾರುಕಟ್ಟೆಗಳು&ವಾಣಿಜ್ಯ ಸಂಕೀರ್ಣಗಳಿಂದ ಬರುತ್ತಿರುವ ಆದಾಯದ ವಿವರ (ರೂ.ಲಕ್ಷಗಳಲ್ಲಿ ) |
|---|---|---|---|---|
| 1 | ಹುಬ್ಬಳ್ಳಿ-ಧಾರವಾಡ | 75 | 0 | 368.88 |
| 2 | ಶಿವಮೊಗ್ಗ | 3 | 19 | 280.5 |
| 3 | ವಿಜಯಪುರ | 0 | 6 | 246.85 |
| 4 | ಮೈಸೂರು | 3 | 27 | 159.61 |
| 5 | ತುಮಕೂರು | 0 | 6 | 114.77 |
| 6 | ದಾವಣಗೆರೆ | 1 | 29 | 133.19 |
| 7 | ಕಲಬುರ್ಗಿ | 3 | 720 | 20.17 |
| 8 | ರಾಯಚೂರು | 1 | 282 | 10 |
| 9 | ಬೆಳಗಾವಿ | 413 | 0 | 105 |
| 10 | ಮಂಗಳೂರು | 26 | 4 | 265.84 |
| 11 | ಬಳ್ಳಾರಿ | 1 | 185 | 80.35 |
|  | ಒಟ್ಟು | **526** | **1278** | **1785.16** |